ವಿಷಯ : ಬಗರ್ ಹುಕುಂ ಸಾಗುವಳಿಗೆ ಸಾಗುವಳಿಯ ಪಟ್ಟಿ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 357 (414)

ಶ್ರೀ ಬಿ.ಹೆಚ್.ಬನ್ನಿಕೋಡ (ಹಿರೆಕೇರೂರು) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಹುಲ್ಲುಗಾವಲುಗಳಿಗಾಗಿ ಮೀಸಲಾಗಿಟ್ಟಿರುವ ಜಮೀನುಗಳನ್ನು ಬಗರ್ ಹುಕುಂ ಸಾಗುವಳಿ ಮಾಡುವವರಿಗೆ ಸಾಗುವಳಿ ಪಟ್ಟಾ ಕೊಡಲು ಸರ್ಕಾರ ಯೋಚಿಸಿದೆಯೇ?

ಆ) ಹಾಗೇ ಯೋಚಿಸಿ ಕ್ರಮ ಜರುಗಿಸಿದಲ್ಲಿ ರೈತರು ಜಾನುವಾರಗಳಿಗೆ ಬೇರೆ ಹುಲ್ಲುಗಾವಲನ್ನು ಮೀಸಲಾಗಿಡದಿದ್ದಲ್ಲಿ ಕೃಷಿಗೆ ಅವಶ್ಯವಿರುವ ಪಶು ಸಂಪತ್ತಿನ ಅಭಿವೃದ್ಧಿಗೆ ತೊಂದರೆಯಾಗುವುದು ಸರ್ಕಾರದ ಗಮನಕ್ಕೆ ಬಂದಿದೆಯೇ

ಇ) ಪ್ರತಿ ಗ್ರಾಮಗಳಲ್ಲಿ ಹುಲ್ಲುಗಾವಲುಗಳನ್ನು ಸಾಗುವಳಿ ಮಾಡಿದರೆ ಹುಲ್ಲುಗವಾಲು ಜಮೀನುಗಳಿಂದ ಬಗರ್‌ಹುಕುಂ ಸಾಗುವಳಿದಾರರನ್ನು ಹೊರಗೆ ಹಾಕಲು ಸರ್ಕಾರ ಕೈಗೊಂಡ ಕ್ರಮವೇನು?

ಶ್ರೀ ಧರಮ್ ಸಿಂಗ್ : (ಕಂದಾಯ ಸಚಿವರು)

ಅ) ಹೌದು, ಈಗಾಗಲೇ ಅಕ್ರಮವಾಗಿ ಸಾಗುವಳಿಯಲ್ಲಿರುವ ಭೂಮಿಯನ್ನು ಸಕ್ರಮೀಕರಣಗೊಳಿಸುವ ಕಾರ್ಯವನ್ನು ಈ ಬಗ್ಗೆ ರಚಿಸಲಾಗಿರುವ ಸಮಿತಿಗಳು ಪರಿಶೀಲಿಸಿ ತೀರ್ಮಾನಿಸುತ್ತದೆ.

ಆ) ಇಲ್ಲ.

ಇ) ಹುಲ್ಲುಗಾವಲು (ಗೋಮಾಳ) ಜಮೀನಿನಲ್ಲಿ ಒತ್ತುವರಿಯನ್ನು ಸಕ್ರಮಗೊಳಿಸಲು, ಕಾನೂನಿನಲ್ಲಿ ಅವಕಾಶಮಾಡಿರುವುದರಿಂದ ಒತ್ತುವರಿದಾರರನ್ನು ಹೊರಗೆ ಹಾಕಲು ಸಾಧ್ಯವಿಲ್ಲ.

ವಿಷಯ : ಗೇರು ಕೃಷಿಗಾಗಿ ಲೀಜಿಗೆ ಕೊಟ್ಟ ಜಮೀನುಗಳನ್ನು ಖಾಯಂ ಮಾಡುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 358(409)

ಶ್ರೀ ಎ. ರುಕ್ಮಯ್ಯ ಪೂಜಾರಿ (ವಿಟ್ಲ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಗೇರು ಕೃಷಿಗಾಗಿ ಗುತ್ತಿಗೆ ಕೊಟ್ಟ ಒಟ್ಟು ಜಮೀನು ಎಷ್ಟು? ಎಷ್ಟು ವ್ಯಕ್ತಿಗಳಿಗೆ?

ಆ) ಅವುಗಳ ಗುತ್ತಿಗೆ ವಾಯಿದೆ ಮುಗಿದಿದೆಯೇ ಹಾಗಿದ್ದಲ್ಲಿ, ಈ ವಿಷಯದಲ್ಲಿ ಸರ್ಕಾರದವರು ಕೈಗೊಂಡ ಕ್ರಮಗಳೇನು? ಹಾಗೂ ಖಾಯಂ ಮಾಡಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಧರಮ್ ಸಿಂಗ್ (ಕಂದಾಯ ಸಚಿವರು) :

ಅ) 3542-25 ಎಕರೆಗಳು.
558 ವ್ಯಕ್ತಿಗಳಿಗೆ ಕೊಟ್ಟಿದ್ದು.

ಆ) 30 ವರ್ಷಗಳ ವಾಯಿದೆ ಎಲ್ಲಾ ಪ್ರಕರಣಗಳಲ್ಲೂ ಮುಗಿದಿದೆ. ಹೀಗೆ ವಾಯಿದೆ ಮುಗಿದಿದ್ದು, ಗುತ್ತಿಗೆ ಷರತ್ತುಗಳನ್ನು ಪೂರೈಸಿದವರಿಗೆ, ಜಿಲ್ಲಾಧಿಕಾರಿಗಳು ಖಾಯ 20 ಮಂಜೂರಿಮಾಡಲು ಕ್ರಮ ತೆಗೆದುಕೊಳ್ಳುತ್ತಿದ್ದಾರೆ.

ವಿಷಯ : ಬಗರ್‌ಹುಕುಂ ಸಾಗುವಳಿ ಸಕ್ರಮ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 361 (707)

ಶ್ರೀ ಕೆ.ಎಸ್.ಈಶ್ವರಪ್ಪ (ಶಿವಮೊಗ್ಗ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿದೆ ದಯವಿಟ್ಟು ಉತ್ತರಿಸುವರೆ?

ಅ) ರೈತರ ಬಗರ್ ಹುಕುಂ ಸಾಗುವಳಿಯನ್ನು ಸಕ್ರಮಗೊಳಿಸಲು ಸರ್ಕಾರವು ಏನು ಕ್ರಮ ತೆಗೆದುಕೊಂಡಿದೆ?

ಆ) ಸರ್ಕಾರದ ಮುಂದೆ ವಿಲೇವಾರಿ ಆಗದೆ ಬಾಕಿ ಉಳಿದಿರುವ ಅರ್ಜಿಗಳ ಸಂಖ್ಯೆ ಎಷ್ಟು? ಮತ್ತು ಇದುವರೆಗೆ ವಿಲೇವಾರಿ ಆದ ಅರ್ಜಿಗಳ ಸಂಖ್ಯೆ ಎಷ್ಟು?

ಇ) ಈ ಕಾರ್ಯವನ್ನು ಸರ್ಕಾರವು ಯಾವಾಗ ಮುಗಿಸುವುದು?

ಶ್ರೀ ಧರ್ಮಸಿಂಗ್ (ಕಂದಾಯ ಸಚಿವರು) :

ಅ) ಕರ್ನಾಟಕ ಭೂ ಕಂದಾಯ ಕಾಯ್ದೆಗೆ ತಿದ್ದುಪಡಿಯನ್ನು ತಂದು ಕಲಂ 94(ಎ)ರಲ್ಲಿ ಬಗರ್ ಹುಕುಂ ಸಾಗುವಳಿಯನ್ನು ಸಕ್ರಮಗೊಳಿಸಲು ಅವಕಾಶ ಮಾಡಲಾಗಿದೆ.

ಆ) ವಿಲೇವಾರಿ ಆಗದೆ ಉಳಿದಿರುವ ಅರ್ಜಿಗಳು ಸರ್ಕಾರದ ಮುಂದೆ ಇರುವುದಿಲ್ಲ. ವಿಲೇವಾರಿ ಆಗದೆ ಉಳಿದಿರುವ ಅರ್ಜಿಗಳು ತಾಲ್ಲೂಕು ಮಟ್ಟದ ಬಗರ್ ಹುಕುಂ ಸಾಗುವಳಿ ಸಕ್ರಮಗೊಳಿಸುವ ಸಮಿತಿಗಳ ಮುಂದೆ ಇರುತ್ತವೆ. ದಿನಾಂಕ 30-6-94 ರವರೆಗೆ ದೊರೆತ ಮಾಹಿತಿಯಂತೆ ಉಳಿದಿರುವ ಅರ್ಜಿಗಳ ಸಂಖ್ಯೆ : 6,30,975.

ದಿನಾಂಕ : 30-6-94ರವರೆಗೆ ವಿಲೇವಾರಿ ಆದ ಅರ್ಜಿಗಳ ಸಂಖ್ಯೆ : 4,55,851.

ಇ) ಬಗರ್ ಹುಕುಂ ಸಾಗುವಳಿಗಳನ್ನು ಸಕ್ರಮಗೊಳಿಸುವ ಸಮಿತಿಗಳಿಗೆ ದಿನಾಂಕ : 30-9-94ರ ಒಳಗೆ ಉಳಿದಿರುವ ಎಲ್ಲಾ ಅರ್ಜಿಗಳನ್ನು ವಿಲೇವಾರಿ ಮಾಡಲು ನಿರ್ದೇಶನವನ್ನು ನೀಡಲಾಗಿದೆ.